# ಶ್ರೀ ಹೆಚ್.ಸಿ.ಶ್ರೀಕಂಠಯ್ಯ ಅಲಿಯಾಸ್ ಅಣ್ಣಯ್ಯ

## ಒಂದು ನೆನಪು



**ದಿನಾಂಕ 18.07.1926 ರಿಂದ 12.03.2011**

## ಅಗಲಿದ ಧೀಮಂತ ನಾಯಕನಿಗೆ ನುಡಿ ನಮನ

ಕರುಣಾ ರತ್ನ, ಬಡವರ ಬಂಧು, ಅಜಾತ ಶತ್ರು ಅಣ್ಣಯ್ಯ ಮತ್ತು ಯಜಮಾನ್ರು ಎಂಬ ಅನೇಕ ಬಿರುದುಗಳಿಂದ ಕೂಡಿದ್ದ ಪೂಜ್ಯ ದಿವಂಗತ ಹೆಚ್.ಸಿ.ಶ್ರೀಕಂಠಯ್ಯನವರು ಚನ್ನರಾಯಪಟ್ಟಣ ತಾಲ್ಲೂಕು ಹಿರೀಸಾವೆ ಗ್ರಾಮದ ದಿವಂಗತರುಗಳಾದ ಶ್ರೀಮತಿ ರಂಗಮ್ಮ ಹಾಗೂ ಜಮೀನ್ದಾರ್ ಪಟೇಲ್ ಚೌಡೇಗೌಡರ ಜೇಷ್ಠ ಪುತ್ರರಾಗಿ ದಿನಾಂಕ 18–07–1926 ರಲ್ಲಿ ಜನಿಸಿದರು. ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಪ್ರೌಢಶಾಲಾ ಶಿಕ್ಷಣವನ್ನು ಹಾಸನ ಹಾಗೂ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನಲ್ಲಿ ಮುಗಿಸಿದರು. ಉನ್ನತ ಶಿಕ್ಷಣವನ್ನು ಮುಂದುವರಿಸುವ ಹಂಬಲ ಮತ್ತು ಕನಸಿದ್ದರೂ ರಾಜಕೀಯ ತುಡಿತದಿಂದ 1942ರಲ್ಲಿ ಸ್ನೇಹಿತರೊಂದಿಗೆ ''ಕ್ವಿಟ್ ಇಂಡಿಯಾ'' ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಹಲವು ತಿಂಗಳುಗಳ ಕಾಲ ಸೆರೆಮನೆ ವಾಸ ಅನುಭವಿಸಿದರು. ನಂತರ ಬಂದ ಅವರು ತೆಂಗಿನಕಾಯಿ ವ್ಯಾಪಾರಿಯಾಗಿ ಅದರಿಂದ ಬೇಸತ್ತ ಶ್ರೀಯುತರು ಹಿರೀಸಾವೆಯ ಮಾಧ್ಯಮಿಕ ಶಾಲೆಯಲ್ಲಿ ಗೌರವ ಉಪಾಧ್ಯಾಯರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ದಿವಂಗತ ಪೂಜ್ಯ ಬಸವಯ್ಯನವರ ಮಾರ್ಗದರ್ಶನದಿಂದ ಪ್ರಭಾವಿತರಾಗಿದ್ದ ಶ್ರೀಯುತರು 1950 ರಲ್ಲಿ ಹಿರೀಸಾವೆ ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿ ಉತ್ತಮ ಅಭಿವೃದ್ಧಿ ಕೆಲಸಗಳನ್ನು ಮಾಡಿದರು. ಇದು ಅವರ ಮುಂದಿನ ರಾಜಕೀಯ ಬೆಳವಣಿಗೆಯ ಮೈಲಿಗಲ್ಲಾಯಿತು. ಪರಿಣಾಮವಾಗಿ 1952ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿ 1962 ರಲ್ಲಿ ತಾಲ್ಲೂಕು ಬೋರ್ಡ್ ಸದಸ್ಯರಾಗಿ ಜನಪ್ರಿಯ ವ್ಯಕ್ತಿಯಾಗಿ ರೂಪುಗೊಂಡ ನಂತರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾಗಿ ಸಾರ್ಥಕ ಸೇವೆ ಸಲ್ಲಿಸಿ ಜನರಿಂದ ನೆಚ್ಚಿನ ಅಣ್ಣಯ್ಯನೆನಿಸಿಕೊಂಡರು. 1967 ರಲ್ಲಿ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಮತ್ತೆ 1972 ರಲ್ಲಿ ನ್ಯಾಷನಲ್ ಮಾರ್ಕೆಂಟಿಂಗ್ ಫೆಡರೇಷನ್ ಅಧ್ಯಕ್ಷರಾಗಿ ಸಮರ್ಥವಾಗಿ ಕೆಲಸ ನಿರ್ವಹಿಸಿದರು. 1973ರ ಜುಲೈ ತಿಂಗಳಿನಲ್ಲಿ ಶ್ರೀಕಂಠಯ್ಯನವರ ಬೆನ್ನೆಲುಬಾಗಿದ್ದ ಅವರ ಧರ್ಮಪತ್ನಿ ಶ್ರೀಮತಿ ನಾಗಮ್ಮನವರ ಅಗಲಿಕೆಯಿಂದ ವಿಚಲಿತರಾಗಿದ್ದರೂ ಎದೆಗುಂದದೆ 1974ರ ಚುನಾವಣೆಯಲ್ಲಿ ಸ್ಪರ್ಧಿಸಿ ವಿಧಾನಸಭೆಗೆ ಆಯ್ಕೆಯಾಗಿ ಅಂದಿನ ಮುಖ್ಯಮಂತ್ರಿ ದಿವಂಗತ ದೇವರಾಜು ಅರಸುರವರ

ಮಂತ್ರಿಮಂಡಲದಲ್ಲಿ ವಿದ್ಯುತ್ ಖಾತೆ, ಪಿ.ಡಬ್ಲ್ಯೂ.ಡಿ. ಪೌರಾಡಳಿತ ಸಚಿವರಾಗಿ ಸುಮಾರು 10 ವರ್ಷಗಳ ಕಾಲ ಸಮರ್ಪಕವಾಗಿ ಕಾರ್ಯ ನಿರ್ವಹಿಸಿದರು. ಗುಂಡೂರಾಯರ ಮಂತ್ರಿಮಂಡಲದಲ್ಲಿ ಸಹಕಾರ ಸಚಿವರಾಗಿ ದಕ್ಷತೆಯಿಂದ ಕೆಲಸ ನಿರ್ವಹಿಸಿದರು. 1989ರಲ್ಲಿ ಲೋಕಸಭಾ ಸದಸ್ಯರಾಗಿ, ವಿಧಾನಪರಿಷತ್ ಸದಸ್ಯರಾಗಿ, ಕೆಲಸ ಮಾಡಿದ ಶ್ರೀಯುತರು 1999ರಲ್ಲಿ ಮತ್ತೆ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿ ಅಂದಿನ ಜನಪ್ರಿಯ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ.ಕೃಷ್ಣ ರವರ ಮಂತ್ರಿಮಂಡಲದಲ್ಲಿ ಪ್ರತಿಷ್ಠಿತ ಕಂದಾಯ ಸಚಿವರಾಗಿಯೂ ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಮೊಟ್ಟ ಮೊದಲ ಬಾರಿಗೆ ಕಂಪ್ಯೂಟರೀಕೃತ ಪಹಣಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ ಖ್ಯಾತಿ ಅವರದ್ದಾಗಿದೆ. ಶ್ರೀಯುತರ ಜನಪರ ಕಾಳಜಿ, ದುರಗಾಮಿತನ, ಬಡವರ ಮೇಲಿದ್ದ ಅಪಾರ ಪ್ರೀತಿ ಹಾಗೂ ಆತ್ಮವಿಶ್ವಾಸದಿಂದ ಅವರು ಆಡುಮುಟ್ಟದ ಸೊಪ್ಪಿಲ್ಲ ಶ್ರೀಕಂಠಯ್ಯನವರು ಮಾಡದ ಕೆಲಸವಿಲ್ಲ ಎಂಬ ಅನಿವಾರ್ಯತೆಯನ್ನು ಜನರಲ್ಲಿ ಉಂಟುಮಾಡಿದ್ದರು. ಕೃಷಿ ಕಾರ್ಮಿಕರ ಮತ್ತು ದೀನ ದಲಿತರ ಹಾಗೂ ಅಲ್ಪಸಂಖ್ಯಾತರ ಮಕ್ಕಳ ವಿಧ್ಯಾಭ್ಯಾಸ ಮತ್ತು ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ತಾಲ್ಲೂಕಿನಾದ್ಯಂತ ಪ್ರಾಥಮಿಕ ಶಾಲಾ ಹಂತದಿಂದ ಉನ್ನತ ಶಿಕ್ಷಣದವರೆಗೆ ಶಾಲಾ ಕಾಲೇಜುಗಳನ್ನು ತೆರೆದು ಶಿಕ್ಷಣ ದಾಸೋಹವನ್ನು ನೀಡಿದರು. ಶಿಕ್ಷಣ ಸಂಸ್ಥೆಗಳನ್ನು ಕಟ್ಟುವಲ್ಲಿ ಅವರ ಶ್ರಮ ಮತ್ತು ಉದ್ಯೋಗ ಕೊಡಿಸುವುದರಲ್ಲಿ ಅವರ ಸೇವೆ ಅಪಾರ. ಅವರೇ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿ ಕುಲದೇವರಾದ ಶ್ರೀ ಆದಿಚುಂಚನಗಿರಿ ಕಾಲ ಭೈರವೇಶ್ವರ ಸ್ವಾಮಿಯವರ ಹೆಸರಿನಲ್ಲಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ತನ್ಮೂಲಕ ಈ ಕೆಳಕಂಡ ಶಾಲಾ ಕಾಲೇಜುಗಳನ್ನು ಪ್ರಾರಂಭಿಸಿ ಸಾವಿರರು ಮಕ್ಕಳಿಗೆ ಶಿಕ್ಷಣ, ನೂರಾರು ನಿರುದ್ಯೋಗಿ ವಿದ್ಯಾವಂತರಿಗೆ ಉದ್ಯೋಗವನ್ನು ಕೊಡಿಸಿ ಪುಣ್ಯಾತ್ಮರಾಗಿದ್ದಾರೆ.

ಶ್ರೀಯುತರು ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ ಮತ್ತು ಈ ಕೆಳಕಂಡ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ.

1. ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ
2. ಶ್ರೀ ಆದಿಚುಂಚನಗಿರಿ ಶಿಕ್ಷಣ ಮಹಾ ವಿದ್ಯಾಲಯ, ಚನ್ನರಾಯಪಟ್ಟಣ
3. ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ, ಚನ್ನರಾಯಪಟ್ಟಣ
4. ಶ್ರೀ ಆದಿಚುಂಚನಗಿರಿ ಔಷಧ ವಿಜ್ಞಾನ ಕಾಲೇಜು, ಚನ್ನರಾಯಪಟ್ಟಣ
5. ಶ್ರೀ ಆದಿಚುಂಚನಗಿರಿ ನರ್ಸಿಂಗ್ ಕಾಲೇಜು, ಚನ್ನರಾಯಪಟ್ಟಣ
6. ಶ್ರೀ ಆದಿಚುಂಚನಗಿರಿ ಕೈಗಾರಿಕ ತರಬೇತಿ ಸಂಸ್ಥೆ, ಚನ್ನರಾಯಪಟ್ಟಣ
7. ಶ್ರೀ ಆದಿಚುಂಚನಗಿರಿ ಕಿರಿಯ ಕಾಲೇಜು, ಬಾಗೂರು
8. ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ, ಆನೆಗೊಳ
9. ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ, ಕಬ್ಬಳಿ
10. ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ವತಿಯಿಂದ ನಾಗಶ್ರೀ ಇಂಗ್ಲೀಷ್ ಸ್ಕೂಲ್ ಚನ್ನರಾಯಪಟ್ಟಣ
11. ನಾಗಶ್ರೀ ಡಿ.ಇಡಿ ಕಾಲೇಜು, ಚನ್ನರಾಯಪಟ್ಟಣ. ಇವುಗಳಲ್ಲದೇ,
12. ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ, ಶ್ರೀನಿವಾಸಪುರ.
13. ಹೇಮಾವತಿ ಕಲ್ಯಾಣ ಮಂಟಪ, ಚನ್ನರಾಯಪಟ್ಟಣ.
14. ಬಸ್ ನಿಲ್ದಾಣ, ಬಸ್ ಡಿಪೋ, ಚನ್ನರಾಯಪಟ್ಟಣ.
15. ಸಿವಿಲ್ ಕೋರ್ಟ್ ಚನ್ನರಾಯಪಟ್ಟಣ
16. ಹಿರೀಸಾವೆ ಕಲ್ಯಾಣ ಮಂಟಪ.
17. ಚೌಡೇಶ್ವರಿ ದೇವಾಲಯ, ಹಿರೀಸಾವೆ.

ಮೇಲ್ಕಂಡ ಜನಪರ ಸೇವೆಗಳೇ ಅಲ್ಲದೆ ಚನ್ನರಾಯಪಟ್ಟಣದ ನಾಗರೀಕರಿಗೆ ಹೇಮಾವತಿ ನದಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಇಡೀ ಹಾಸನ ಜಿಲ್ಲೆಗೆ ವಿದ್ಯುತ್ತಿನ ಮಿಂಚಿನ ಸಂಚಾರ. ಮುಖ್ಯವಾಗಿ ಸಾವಿರಾರು ಜನರಿಗೆ ವಿವಿಧ ಕ್ಷೇತ್ರಗಳಲ್ಲಿ ವಿದ್ಯಾಭ್ಯಾಸಕ್ಕನುಗುಣವಾಗಿ ಉದ್ಯೋಗ: ಸಾವಿರಾರು ವಿದ್ಯಾರ್ಥಿಗಳಿಗೆ ಬಿ.ಇಡಿ, ಇಂಜಿನಿಯರಿಂಗ್, ಮೆಡಿಕಲ್, ಎಂ.ಬಿ.ಎ, ಎಂ.ಸಿ.ಎ ಯಂತಹ ಕೋರ್ಸ್‌ಗಳನ್ನು ಓದಲು ಅವಶ್ಯ ಅನುಕೂಲ ಕಲ್ಪಿಸಿದರು. ಜೊತೆಗೆ ಎಲ್ಲಾ ಗ್ರಾಮಗಳಿಗೂ ರಸ್ತೆ, ಅಂಗನವಾಡಿ ಕೇಂದ್ರಗಳು, ಚರಂಡಿ ವ್ಯವಸ್ಥೆ, ಆರೋಗ್ಯ ಕೇಂದ್ರಕ್ಕೆ ಸ್ಥಾಪನೆ ಇನ್ನೂ ಮುಂತಾದ ಅಭಿವೃದ್ಧಿ ಕಾರ್ಯಗಳು ಮಾಡಿದ್ದರು. ಎಲ್ಲಕಿಂತ ಮುಖ್ಯವಾಗಿ ಶ್ರೀ ಆದಿಚುಂಚನಗಿರಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪೂಜ್ಯರ ಜೊತೆಯಲ್ಲಿ ವಿದೇಶಗಳಲ್ಲಿ ಪ್ರವಾಸ ಮಾಡಿ ಧಾರ್ಮಿಕ ಪ್ರಚಾರ ಕೈಗೊಂಡು ಆ ಮೂಲಕ ಮಠದ ಏಳಿಗೆಗೆ ದುಡಿದಿರುವುದು ಒಂದು ಸಾಹಸವೇ ಸರಿ. ಅಲ್ಲದೆ ಮೈಸೂರು ಶಾಖಾಮಠದ ಅಭಿವೃದ್ಧಿಗಾಗಿ ಚಾಮುಂಡಿಬೆಟ್ಟದ ತಪ್ಪಲಲ್ಲಿ ಮೈಸೂರಿನ ಪ್ರತಿಷ್ಠಿತ ಉದ್ಯಮಿಗಳಾದ ಸನ್ಮಾನ್ಯ ಬೋರಯ್ಯ ಮತ್ತು ಬಸವಯ್ಯ ಕುಟುಂಬ ವರ್ಗದವರಿಂದ 100 ಎಕರೆ ಭೂಮಿಯನ್ನು ಶ್ರೀ ಮಠಕ್ಕೆ ಕೊಡಿಸಿರುವುದು ಅತ್ಯಂತ ಅಚ್ಚರಿಯ ಸಂಗತಿ ಅಂತೆಯೇ ಬೆಂಗಳೂರಿನ ವಿಜಯನಗರದಲ್ಲಿರುವ ಶ್ರೀ ಮಠದ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ ಮಾಡುವುದರ ಮುಖಾಂತರ ಬೆಂಗಳೂರು ಮಹಾಜನತೆಯ ಕಲ್ಯಾಣಕ್ಕಾಗಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಪೂರಕವಾದ ಬೆಳವಣಿಗೆ ಹೊಂದಲು ಅವರು ಸದಾ ದುಡಿಯುತ್ತಿದ್ದರು. ಶ್ರೀಯುತರು ಜನಸಾಮಾನ್ಯರನ್ನು ನೋಡುವ ಮತ್ತು ಮಾತನಾಡಿಸುವ ಹಾಗೂ ನಡೆದುಕೊಳ್ಳುವ ಗುಣ ಎಂತಹವರನ್ನು ಅಚ್ಚರಿಪಡಿಸುವಂತಹದ್ದು ಇವರು ಎಂತಹ ಸಂದರ್ಭದಲ್ಲೂ ಜನತೆಯ ನಡುವೆಯೇ ಬೆರೆಯುವ ಮತ್ತು ಅವರ ಕೆಲಸ ಮಾಡಿಕೊಡುವ ವಿಶೇಷವಾದ ಸದ್ಗುಣವನ್ನು ಬೆಳೆಸಿಕೊಂಡ ಒಬ್ಬ ಮಹಾವ್ಯಕ್ತಿಯಾಗಿದ್ದರು. ಅವರ ದೂರ ದೃಷ್ಟಿ ಯಾವಾಗಲೂ ಜನರ ಅಭಿವೃದ್ಧಿಯೇ ಆಗಿತ್ತು. ಅವರೊಬ್ಬ ಸಾಮಾಜಿಕ ಚಿಂತಕ ಮತ್ತು ಅದರ ಪ್ರವರ್ತಕರಾಗಿ ಎಲ್ಲ ವರ್ಗದ ಜನರ ಕಲ್ಯಾಣಕ್ಕಾಗಿ ದುಡಿದ ಮಹಾಶಿಲ್ಪಿಯಾಗಿದ್ದರು ಮತ್ತು ಅಜಾತ ಶತೃ ಎನಿಸಿಕೊಂಡಿದ್ದರು.

ಜಾನಪದ ವಾಣಿಯಂತೆ

ಬೆಳಗಾಗ ನಾ ಎದ್ದು ಯಾರ್‍ಯಾರ ನೆನೆಯಾಲಿ

ಎದ್ದೊಂದುಗಳಿಗೆ ನೆನೆದೇನಾ – ಎನ್ನುವಂತೆ

ಇಂತಹ ಹೆಗ್ಗಳಿಕೆಗೆ ಪಾತ್ರರಾಗಿದ್ದು ಪೂಜ್ಯರಿಗೆ 05 ಹೆಣ್ಣು ಜನ ಮಕ್ಕಳು 03 ಜನ ಗಂಡುಮಕ್ಕಳಿದ್ದು, 13 ಜನ ಮೊಮ್ಮಕ್ಕಳು 05 ಜನ ಮುಮ್ಮಕ್ಕಳಿದ್ದು ನೆಮ್ಮದಿ ಮತ್ತು ತೃಪ್ತಿದಾಯಕವಾದ ಸಾಂಸಾರಿಕ ಬದುಕನ್ನು ಸಾಧಿಸಿದ್ದಾರೆ.

ವಿದೇಶಿ ಬರಹಗಾರ ಹೇಳಿರುವಂತೆ, ‘‘ವ್ಯಕ್ತಿಯೊಬ್ಬ ದೊಡ್ಡವ, ಮಹಾನುಭಾವ ಅನ್ನಿಸಿಕೊಳ್ಳುವುದು ಅವನು ಮಾಡಿದ ಪುಣ್ಯದ ಕೆಲಸಗಳಿಂದ, ಧರ್ಮಕಾರ್ಯಗಳಿಂದ, ಯಾವ ವ್ಯಕ್ತಿ ತನ್ನ ಬದುಕಿನ ಅವಧಿಯಲ್ಲಿ ಧೀನ ದಲಿತರ, ಕೃಷಿ ಕಾರ್ಮಿಕರ ಅಲ್ಪಸಂಖ್ಯಾತರ ಉಳಿವಿಗಾಗಿ ಮತ್ತು ಅವರ ಉನ್ನತಿಗಾಗಿ ಅರ್ಪಣಾನುಮನೋಭಾವದಿಂದ ಕಾಳಜಿವಹಿಸಿ ದುಡಿಯುತ್ತಾನೋ ಅಂತಹ ವ್ಯಕ್ತಿಯನ್ನು ಜನರು ತಮ್ಮ ಹೃದಯಾಂತರಾಳದಿಂದ ಭಗವಂತನೆಂದು ಪೂಜಿಸುತ್ತಾರೆ. ಅದಕ್ಕೆ ಸನ್ಮಾನ್ಯ ಅಣ್ಣಯ್ಯನವರು ಮಾತ್ರ ಅರ್ಹರು.

ಬದುಕಿ ಸಾಯುವವರು ಅಪಾರ

ಸತ್ತೂ ಬದುಕುವವರು ಅಪರೂಪ

– ನಾಣ್ನುಡಿ.